(ಇಂದು ದಿನಾಂಕಃ 25–10–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ ಃ-

18) ಪ್ರಸ್ತುತ ದಾವಾ ಆಸ್ತಿಯಲ್ಲಿ ಶರಣಪ್ಪ ಕುಲಕರ್ಣಿರವರು ಶೆಡ್ ಕಟ್ಟಿಕೊಂಡು ವಾಸವಿರುತ್ತಾರೆ ಎಂದರೆ ಸರಿ. ಸದರಿಯವರನ್ನು ತೆರವುಗೊಳಿಸಲು ನಾನು ಹಾಗೂ ಮತ್ತೆ 15 ಜನ ಸೇರಿಕೊಂಡು ದಿನಾಂಕ 10-08-2025 ರಂದು ಮದ್ಯಾಹ್ನ 01-25 ಗಂಟೆಗೆ ಬಲಪ್ರಯೋಗ ಮಾಡಿ ಆತನ ಮೇಲೆ ಹಲ್ಲೆ ಮಾಡಿರುತ್ತೇವೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನನ್ನ ಹೊಲಕ್ಕೆ ಹೋಗಿರುತ್ತೇನೆ ಆ ಸಮಯದಲ್ಲಿ ಅಲ್ಲಿಯೆ ಜಗಳವಾಗಿರುತ್ತದೆ ನನಗೆ ಸಂಬಂದ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಗಳವನ್ನು ಶರಣಪ್ಪ ರವರ ಹೆಂಡತಿ ಮಕ್ಕಳ ವಿರುದ್ಧ ನಾನು ಪ್ರಾರಂಭ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ದಿನಾಂಕದಂದು ನಾನು ದಾವಾ ಆಸ್ತಿಗೆ ಅತೀಕ್ರಮಣ ಪ್ರವೇಶ ಮಾಡಿ ಶರಣಪ್ಪ ರವರ ಮೇಲೆ ಹಲ್ಲೆ ಮಾಡಿರುತ್ತೇನೆ ಅಂದರೆ ಸರಿಯಲ್ಲ.

19) ಸುಮಾರು 60 ವರ್ಷಗಳಿಂದ ಶರಣಪ್ಪ ರವರ ತಂದೆಯು ದಾವಾ ಆಸ್ತಿಯ ಉಳುಮೆ ಮಾಡಿ, ಅವರ ನಂತರದಲ್ಲಿ ಶರಣಪ್ಪ ರವರು ಅದನ್ನು ಇಂದಿನವರೆಗೆ ಉಳುಮೆ ಮಾಡುತ್ತಾ ಬಂದಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಪರಪ್ಪರವರಿಗೆ ದಾವಾ ಆಸ್ತಿಯನ್ನು ವರ್ಷದ ಲಾವಣಿಗೆ ನೀಡಿ, 2 ಚೀಲ ಗೋದಿ ಮತ್ತು ಜೋಳ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮತ್ತೆ ಮುಂದುವರೆದು ನಾನು ಮತ್ತೆ ಲಾವಣಿಯವನ್ನು ಬೇರೆಯವರಿಗೆ ನೀಡಿದ್ದು ಶರಣಪ್ಪ ಇತನು ಅದಕ್ಕೆ ತಕರಾರು ಮಾಡಿ ನಂತರ ಅವರನ್ನು ಬಿಡಿಸಿ ಸ್ವತಃ ತಾನೇ ಮಾಡುತ್ತಾ ಬಂದಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಬಿಡಿಸಲು ಕೇಳಿದ್ದು ಸದರಿಯವನು ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ವಿಷಯಗಳನ್ನು ನನ್ನ ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಸಂಮಜಸವಾದ ಉತ್ತರ ನೀಡುತ್ತಿಲ್ಲ.

20) ಶರಣಪ್ಪನು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿದ್ದು ಅವರ ಕಬ್ಜೆಯನ್ನು ಬಿಡಿಸಲು ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವಾ ಪರಿಹಾರ ಪಡೆಯಲು ಕಾನೂನು ಅರ್ಹತೆ ಇರುವುದಿಲ್ಲ ಅಂದರೆ ಸರಿಯಲ್ಲ.

**1** ರಿಂದ **8** ನೇ ಪ್ರತಿವಾದಿಯರು ಗೈರು ಹಾಜರಿದ್ದು ಪಾಟೀಸವಾಲಿಗೆ ಅಂತಿಮ ಅವಕಾಶ ನೀಡಲಾಗಿರುತ್ತದೆ**.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**